## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ

| | |
|---|---|
| ಓ ಎಸ್ ನಂ | 137/2013 |
| 1 ನೇ ಪ್ರತಿವಾದಿ | ಡಿ.ಡಬ್ಲ್ಯೂ-1 |
| ದಿನಾಂಕ | 25-02-2026 |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಬಿ ಕೆ ವಕೀಲರಿಂದಃ

1) ಶ್ರೀಪತಿ ಮತ್ತು ಗುರುಪಾದ ಖಾಸ ಅಣ್ಣತಮ್ಮಂದಿರು ಎಂದರೆ ಸರಿ. ಸರ್ವೆ ನಂಬರ 384 ಇದು 15 ಎಕರೆ 13 ಗುಂಟೆ ಜಮೀನು ಇತ್ತು ಎಂದರೆ ಸರಿ. ಅದರಲ್ಲಿ 5 ಗುಂಟೆ ಪೂಟ ಖರಾಬ ಆಗಿರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ನಿಮ್ಮ ಗಂಡ ಗುರುಪಾದ ಇವರು 2 ಎಕರೆ ಜಮೀನು ಕೂಳ ನಾತೆಯಿಂದ ಉಳುಮೆ ಮಾಡುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು 2 ಎಕರೆ ಕೂಳ ನಾತೆ ಮತ್ತು 2 ಎಕರೆ ಮಾಲ್ಕಿನಾತೆಯಿಂದ ಉಳುಮೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಗಂಡ 2 ಎಕರೆಗೆ ಸಂಬಂಧಿಸಿದಂತೆ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಪಾರ್ಮ ನಂಬರ 7 ರಲ್ಲಿ ಉಳುಮೆ ಮಾಡುತ್ತಿರುವ ಜಮೀನು ಮತ್ತು ಸ್ವಂತ ಆಸ್ತಿ ಬಗ್ಗೆ ವಿವರಿಸಲು ಕಾಲಂ ನಮೂದು ಆಗಿರುತ್ತದೆ ಎಂದರೆ ಸರಿ. ನಿ ಪಿ 11 ರಲ್ಲಿ ನಮಗೆ ಸೇರಿರುವ ಸ್ವಂತ ಆಸ್ತಿಯ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನನ್ನ ಗಂಡ ಬಹಳ ವರ್ಷಗಳಿಂದ ಬೇರೆಯಾಗಿ 2 ಎಕರೆ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದೇನೆ ಎಂದು ನಿ ಪಿ 11 ರಂತೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ 5 ಎಕರೆ 24 ಗುಂಟೆ ಜಮೀನು ಕುರಿತು ಪುಂಡಲೀಕ ರಾಮಾ ಕರಡೆ ಇವರು ಸಹ ಪಾರ್ಮ ನಂಬರ 7 ಅರ್ಜಿ ಸಲ್ಲಿಸಿದ್ದರಿಂದ ಅವರ ಹೆಸರಿನಲ್ಲಿ 5 ಎಕರೆ 24 ಗುಂಟೆ ಜಮೀನು ಮಂಜೂರು ಆಗಿರುತ್ತದೆ ಎಂದರೆ ಸಾಕ್ಷಿಯು 5 ಎಕರೆ ಜಮೀನು ಬಗ್ಗೆ ಮಾತ್ರ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಗಂಡ 5 ಎಕರೆ ಜಮೀನು ಮಂಜೂರು ಆಗಿರುತ್ತದೆ ಎಂದು ಹೇಳಿದ ಆದಾರ ಮೇರೆಗೆ ಹೇಳುತ್ತಿದ್ದೇನೆ.

2) ಶ್ರೀಪತಿ ಈತನು 6 ಎಕರೆ ಜಮೀನನ್ನು ಇಂದ್ರಾಬಾಯಿ ಶಿಂಗಾಡೆ ಇವರಿಗೆ ಖರೀದಿ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಇಂದ್ರಾಬಾಯಿ ಇವರು ವಾಳಕೆ ಎನ್ನುವವರಿಗೆ ಮಾರಾಟ ಮಾಡಿದರು ಎಂದರೆ ಸರಿ. ನನ್ನ ಗಂಡ ಗ್ರಾಮ ಲೆಕ್ಕಾಧಿಕಾರಿಗಳ ಕೈ ಕೆಳಗೆ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು ತೀರಿಕೊಂಡ ನಂತರ ನನ್ನ ಮಗ ಅದೇ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಗಂಡ ಮತ್ತು ಗ್ರಾಮ ಲೆಕ್ಕಾಧಿಕಾರಿಗಳ ಜೊತೆ ಚನ್ನಾಗಿ ಸಂಬಂಧ ಇತ್ತು ಎಂದರೆ ಸರಿ.

3) ಪುಂಡಲೀಕ ರಾಮಾ ಕರಡೆ ಈತನು ನಿ ಪಿ 14 ರಂತೆ ವಾದಿ ಮತ್ತು ಪ್ರತಿವಾದಿಗಳ ಮೇಲೆ ಅಸಲು ದಾವೆ ಸಂಖ್ಯೆ 5/2005 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನಮಗೆ ನೋಟೀಸು ಜಾರಿಯಾದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ನನ್ನ ಮಗ ವಕೀಲರಿಗೆ ನೇಮಕ ಮಾಡಿರುತ್ತಾರೆ. ಆ ದಾವೆಯಲ್ಲಿ ಪುಂಡಲೀಕ ರಾಮಾ ಕರಡೆ ಇವರಿಗೆ 5 ಎಕರೆ 24 ಗುಂಟೆ ಜಮೀನು ಡಿಕ್ರಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

4) ಶ್ರೀಪತಿ ಈತನ 2 ಎಕರೆ ಜಮೀನಿಗೆ ನನ್ನ ಗಂಡ ತಾವು ಗ್ರಾಮ ಲೆಕ್ಕಾಧಿಕಾರಿಗಳ ಜೊತೆ ಶಾಮಿಲಾಗಿ ನಿ ಪಿ 5 ರಂತೆ ಪೂಕಳ ಹೆಸರು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ 2 ಎಕರೆ ಜಮೀನು ಖರೀದಿ ಮಾಡಿರುವುದಿಲ್ಲ ಆದರೆ ನಾವು ಮಾಲಿಕ ಆಗಿರುತ್ತವೆ ಎಂದು ನುಡಿಯುತ್ತಾರೆ. ಯಾವುದೆ ನೊಂದಾಯಿತ ದಾಖಲೆಗಳು ಇಲ್ಲದೆ ಬೋಗಸ ಹೆಸರು ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ಪ್ರಸ್ತುತ ದಾವೆಯು ಯಾವ ಕಾರಣಕ್ಕೆ ಸಲ್ಲಿಸಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. 1 ಎಕರೆ 24 ಗುಂಟೆ ಮತ್ತು 5 ಗುಂಟೆ ಪೂಟ ಖರಾಬ ಸೇರಿ ಒಟ್ಟು 1 ಎಕರೆ 29 ಗುಂಟೆ ವಾದಿಗಳ ಕಬಜೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನಿ ಪಿ 5 ರಲ್ಲಿ ನಮೂದು ಆಗಿರುವ ಹೆಸರಿನ ದುರುಪಯೋಗ ಪಡೆದುಕೊಂಡು ಪ್ರತಿವಾದಿ ನಂ.6 ರಿಂದ 8 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ಎಕರೆ ಮಂಜೂರು ಆಗಿದ್ದ ಜಮೀನನ್ನು ನಾವು ಮಾರಾಟ ಮಾಡಿದ್ದರಿಂದ ಯಾವುದೇ ಜಮೀನು ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದೆ ಇದ್ದರೂ ಸಹ ಪ್ರತಿವಾದಿ ನಂ.6 ರಿಂದ 8 ರ ಪರವಾಗಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ